ಗ್ರಾಮೀಣ ಸಾಮಾನ್ಯ ಸೌಲಭ್ಯ ಕಾಮಗಾರಿಗಳ ಅನುಷ್ಠಾನಕ್ಕಾಗಿ ಸದರಿ ಕಾಮಗಾರಿಗಳನ್ನು ಎಲ್ & ಟಿ ಸಂಸ್ಥೆಯವರಿಗೆ ನೀಡಲಾಗಿದೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಗ್ರಾಮ ಪಂಚಾಯತ್‌ಗಳಿಗೆ ನೆರವು ಸಂಸ್ಥೆಗಳ ಹಾಗೂ ಸರ್ಕಾರೇತರ ಸಂಸ್ಥೆಗಳ ಮೂಲಕ ಸಹಾಯವನ್ನು ಒದಗಿಸುವುದಲ್ಲದೇ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಹಾಗೂ ಜಿಲ್ಲಾ ನೆರವು ಘಟಕಗಳ ತಾಂತ್ರಿಕ ಸಿಬ್ಬಂದಿಯ ಮೂಲಕ ತಾಂತ್ರಿಕ ಸಹಾಯ ಮತ್ತು ಉಸ್ತುವಾರಿ ಮಾಡಲಾಗುತ್ತಿದೆ

106 (20) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಎಂ ಎನ್ ಪಿ ಗ್ರಾಮೀಣ ಕುಡಿಯುವ ನೀರಿನ ಯೋಜನೆಗೆ ರಾಜ್ಯ ಸರ್ಕಾರ ನಿಗದಿಪಡಿಸಿದ ಮೊತ್ತವೆಷ್ಟು ,

ಆ) ಇಲ್ಲಿಯವರೆಗೆ ಖರ್ಚಾದ ಮೊತ್ತವೆಷ್ಟು ,

ಇ) ಈ ಯೋಜನೆ ನಿರ್ವಹಣೆ ಜಿಲ್ಲಾ ಪಂಚಾಯತಿಯಿಂದ ಮಾಡಲಾಗಿದೆಯೇ ಅಥವಾ ಗ್ರಾಮ ಪಂಚಾಯತಿಗಳಿಂದ ಮಾಡಲಾಗಿದೆಯೇ,

ಈ) ಜಿಲ್ಲಾ ಪಂಚಾಯತಿವಾರು ಖರ್ಚಾದ ಹಣದ ಒಟ್ಟು ಮೊತ್ತವೆಷ್ಟು ?

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು)

ಅ) 2006–07ರ ಸಾಲಿನಲ್ಲಿ ರಾಜ್ಯ ವಲಯದ MNPಯಡಿ ಗ್ರಾಮೀಣ ಕುಡಿಯುವ ನೀರಿನ ಬಾಬ್ತಿಗಾಗಿ ಆಯವ್ಯಯದಲ್ಲಿ ರೂ 44 00 ಕೋಟಿ ಅನುದಾನ ನಿಗದಿ ಪಡಿಸಲಾಗಿತ್ತು ಇದನ್ನು ಕೇಂದ್ರ ವಲಯದ ARWSP ಗೆ ಪೂರಕವಾಗಿ ರೂ 94 32 ಕೋಟಿಗೆ ಹೆಚ್ಚಳ ಮಾಡಲಾಗಿದೆ

ಆ) ಈ ಬಾಬ್ತು ಡಿಸೆಂಬರ್ 2006ರ ಅಂತ್ಯಕ್ಕೆ ರೂ 70 68 ಕೋಟಿ ವೆಚ್ಚವಾಗಿದೆ

ಇ) ಕುಡಿಯುವ ನೀರಿನ ಯೋಜನೆಗಳ ನಿರ್ವಹಣೆಯನ್ನು ಗ್ರಾಮ ಪಂಚಾಯತಿಗಳು ಮಾಡುತ್ತಿವೆ ಯೋಜನೆಗಳ ಅನುಷ್ಠಾನವನ್ನು ಜಿಲ್ಲಾ / ತಾಲ್ಲೂಕು ಇಂಜಿನಿಯರಿಂಗ್ ವಿಭಾಗಗಳು PRIs ಗಳ ಸಮನ್ವಯದಲ್ಲಿ ಮಾಡುತ್ತಿವೆ

ಈ) ರಾಜ್ಯ ಮತ್ತು ಕೇಂದ್ರವಲಯದಡಿ ಪ್ರಸಕ್ತ ಸಾಲಿನಲ್ಲಿ ಒಟ್ಟು ರೂ 153 00 ಕೋಟಿ ಡಿಸೆಂಬರ್ 2006ರ ಅಂತ್ಯಕ್ಕೆ ಕುಡಿಯುವ ನೀರಿನ ಬಾಬ್ತಿಗಾಗಿ ವೆಚ್ಚವಾಗಿದೆ

107 (21) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಕುಡಿಯುವ ನೀರಿಗಾಗಿ ಕೇಂದ್ರ ಸರ್ಕಾರದ ಸ್ವಜಲಧಾರ ಯೋಜನೆಯಲ್ಲಿ ಒಟ್ಟು ಮಂಜೂರಾದ ಯೋಜನೆಗಳು ಯಾವುವು , ಅವುಗಳ ಒಟ್ಟು ಅಂದಾಜು ವೆಚ್ಚವೆಷ್ಟು ,

ಆ) ಇಲ್ಲಿಯವರೆಗೆ ಖರ್ಚಾದ ಹಣವೆಷ್ಟು ,

ಇ) ಈ ಯೋಜನೆಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಹಣವೆಷ್ಟು (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು) ?

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)

ಅ) ಸ್ವಜಲಧಾರ ಯೋಜನೆಯಡಿಯಲ್ಲಿ ಒಟ್ಟು 1547 ಯೋಜನೆಗಳು ಇಲ್ಲಿಯವರೆಗೆ ಮಂಜೂರಾಗಿದ್ದು ಅವುಗಳ ವಿವರ ಕೆಳಕಂಡಂತಿರುತ್ತವೆ

ಕ್ರ ಸಂ	ಮಂಜೂರಾದ ವರ್ಷ	ಜಿಲ್ಲೆಗಳು	ಯೋಜನೆಗಳ ಸಂಖ್ಯೆ
1	2002–03	5	52
2	2003–04	24	312
3	2004–05	14	175
4	2004–05 (ಹೆಚ್ಚುವರಿ)	5	37
5	2005–06	25	320
6	2005–06 (ಹೆಚ್ಚುವರಿ)	10	180
7	2006–07	22	471
ಒಟ್ಟು			1547